


# ಸಂಪರ್ಕ ಬಲೆ ಹೊಲಿಯಲೊಂದು ಟೆಕ್ನಾಲಜಿ

ಮನುಷ್ಯನನ್ನು ಸದಾ ಅತೃಪ್ತಿಯಲ್ಲಿ ಇರಿಸುವ ಸಂಗತಿಗಳಲ್ಲಿ 'ವೇಗ'ವೂ ಒಂದು. ತನ್ನ ಚಲನೆಯ ವೇಗಕ್ಕಿಂತಲೂ ಮನೋವೇಗದ ಸಾಧ್ಯತೆಗಿಂತಲೂ ಮಿಗಿಲಾದ ವೇಗದ ಹುಡುಕಾಟ ಮಾನವ ಚರಿತ್ರೆಯುದ್ದಕ್ಕೂ ಕಾಣಿಸುತ್ತದೆ. ಈ ವೇಗದ ಹಂಬಲದ ಪರಿಣಾಮವೇ ಸಂಪರ್ಕ ಸಂವಹನ ಕ್ಷೇತ್ರದಲ್ಲಿನ 'ಜಿ' ಮೈಲಿಗಲ್ಲುಗಳು. '1ಜಿ' ತೆವಳುವಿಕೆಯಿಂದ ಶುರುವಾದ ಈ ತಂತ್ರಜ್ಞಾನ, ಈಗ '4ಜಿ'ಯನ್ನು ದಾಟಿ ಅನೂಹ್ಯ ವೇಗದ '5ಜಿ'ಗೆ ಬಂದುನಿಂತಿದೆ. ವಿಶ್ವದ ಕೆಲವು ದೇಶಗಳಲ್ಲಿ ಈಗಾಗಲೇ ಬಳಕೆಯಲ್ಲಿರುವ '5ಜಿ' ಭಾರತದ ಪೇಟೆಯಲ್ಲಿ ಕಾಣಿಸಿಕೊಳ್ಳಲು ತುದಿಗಾಲಲ್ಲಿದೆ. ಹೊಸ ತಂತ್ರಜ್ಞಾನದ ಆಗಮನದ ಬಗ್ಗೆ ಒಂದು ವರ್ಗ ಅರಳುಗಣ್ಣಾಗಿದ್ದರೆ, ಮತ್ತೊಂದು ವರ್ಗ '5ಜಿ' ಬಗ್ಗೆ ನಿರುತ್ಸಾಹದ ಮಾತುಗಳನ್ನಾಡುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿನ್ನೂ '3ಜಿ' ತಂತ್ರಜ್ಞಾನವೇ ಕುಂಟುಗಾಲಿನಲ್ಲಿ ನಡೆಯುತ್ತಿರುವಾಗ, '5ಜಿ' ತಂತ್ರಜ್ಞಾನ ನಮ್ಮ ದೇಶಕ್ಕೆ ಅನಗತ್ಯ ಹೊರೆಯಲ್ಲವೇ ಎನ್ನುವ ಜಿಜ್ಞಾಸೆಯೂ ಇದೆ. ಆದರೆ, ಸಂಶೋಧನೆ, ವೈದ್ಯಕೀಯ ರೀತಿಯ ಕೆಲವು ಕ್ಷೇತ್ರಗಳಲ್ಲಿ '5ಜಿ' ಜಾದೂವನ್ನೇ ಸೃಷ್ಟಿಸಬಲ್ಲದು. '5ಜಿ' ತಂತ್ರಜ್ಞಾನದ ಅನುಕೂಲ ಹಾಗೂ ಮಿತಿಗಳೊಂದಿಗೆ, ಈ ತಂತ್ರಜ್ಞಾನದೊಂದಿಗೆ ತಳಕು ಹಾಕಿಕೊಂಡಿರುವ ಮಿಥ್ಯೆಗಳ ಬಗೆಗೂ ಈ ವಿಶ್ಲೇಷಣೆ ಬೆಳಕು ಚೆಲ್ಲುತ್ತದೆ.

■ ಸುಧೀಂದ್ರ ಹಾಲ್ದೊಡ್ಡೇರಿ